**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಕೆ.ಆರ್.ನಗರ**

**ಸಿ.ಸಿ. ನಂ.42/2017**

**ಪಿರ್ಯಾದಿದಾರರುಃ** ಸಾಲಿಗ್ರಾಮ ಪೋಲೀಸ್ ಠಾಣೆ

- **ವಿರುದ್ಧ** –

**ಆರೋಪಿತರುಃ** 1. ಕುಮಾರ
ಬಿನ್ ಲೇಟ್ ತಿಮ್ಮಣ್ಣೇಗೌಡ,
42 ವರ್ಷ,
ವಾಸಃ ಕಾವಲು ಹೊಸೂರು ಗ್ರಾಮ,
ಕೆ.ಆರ್.ನಗರ ತಾಲ್ಲೂಕು,
ಮೈಸೂರು ಜಿಲ್ಲೆ.

**ದಂ. ಪ್ರ. ಸಂ. ಕಲಂ 313 ರಡಿ ಆಪಾದಿತರ ಹೇಳಿಕೆ**

ಪ್ರಶ್ನೆ 1: ಅಭಿಯೋಜನೆಯ ಪರವಾಗಿ ನುಡಿದ ಸಾಕ್ಷವನ್ನು ನೀವು ಕೇಳಿರುವಿರಾ?
ಉತ್ತರಃ

ಪ್ರಶ್ನೆ 2: ಫ್ರಾಸಾ.1 ನಾರಾಯಣ.ಆರ್ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ: 27/07/2016 ರಂದು ತಾನು ಮತ್ತು ಸಿಬ್ಬಂದಿಗಳು ಚಾಸಾ 2. ಮತ್ತು 3 ರವರು ಮಠದ ಕಾವಲು ಶಾಖೆಯ ಅರಣ್ಯ ಪ್ರದೇಶದಲ್ಲಿ ಗಸ್ತಿನಲ್ಲಿರುವವಾಗ ತಮಗೆ 1 ನೇ ಆರೋಪಿಯಾದ ನಿಮ್ಮ ಮನೆಯ ಮನೆಯ ಹಿಂಭಾಗದಲ್ಲಿ ಅಕ್ರಮವಾಗಿ ಅರಣ್ಯದಿಂದ ನೀಲಗಿರಿ ಸ್ತರಗಳನ್ನು ಕಡಿದು ಅಕ್ರಮವಾಗಿ ದಾಸ್ತಾನು ಮಾಡಿರುತ್ತಾರೆ ಎಂಬ ಮಾಹಿತಿಯ ಮೇರೆಗೆ ತಾವು ದಿ: 27/07/2016 ರಂದು ಸಂಜೆ 5.30 ಗಂಟೆ ಸಮಯದಲ್ಲಿ 1 ನೇ ಆರೊಪಿಯಾದ ಮನೆಯ ಹತ್ತಿರ ಹೋಗಿ ತಪಾಸನೆ ಮಾಡುತ್ತಿದ್ದಾಗ ತಮಗೆ 20 ಸಂಖ್ಯೆಯ ನೀಲಗಿರಿ ಸರಗಳು ಅಕ್ರವಾಗಿ ದಾಸ್ತಾನು ಮಾಡಿರುವುದು ಕಂಡು ಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?
ಉತ್ತರಃ

ಪ್ರಶ್ನೆ 3: ಫ್ರಾಸಾ.1 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ನಂತರ ಟೋಬ್ಯಾಕೋ ಬ್ಯಾರನ್ ಮನೆಯ ಬಳಿ ಇದ್ದ ನಾಗೇಶ ಎಂಬ ವ್ಯಕಕ್ತಿಯನ್ನು ವಿಚಾರಿಸಿದಾಗ ತಕ್ಷಣ ಸದರಿ ಸ್ಥಳಕ್ಕೆ ಬಂದ 1 ನೇ ಆರೋಪಿಯಾದ ನೀವು ಮತ್ತು 2 ನೇ ಆರೋಪಿ ಸ್ಥಳಕ್ಕೆ ಬಂದು ತಾವು ನಮ್ಮ ಇಷ್ಟ ಬಂದ ಹಾಗೆ ಮಾಡುತ್ತೇವೆ ಕಾಡು ನಿಮ್ಮಪ್ಪನದ ಎಂದು ಬೋಳಿಮಗನೇ ಎಂದು ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿರುತ್ತಾರೆ ಮತ್ತು ತನ್ನ ಕರ್ತವ್ಯವನ್ನು ಮಾಡಲು ಅಡ್ಡಿ ಪಡಿಸಿರುತ್ತಾರೆ ಎಂದು, 2 ನೇ ಆರೋಪಿ ತನಗೇ ಕೊಲೆ ಬೆದರಿಕೆಯನ್ನು ಹಾಕಿದ್ದು ಸದರಿ ವಿಚಾರವನ್ನು ತಾನು ನಮ್ಮ ಹಿರಿಯ ಅಧಿಕಾರಿಗಳಿಗೆ ತಿಳಿಸಿ ಆರೋಪಿತರಾದ ನಿಮ್ಮ ವಿರುದ್ಧ ದೂರು ದಾಖಲು ಮಾಡಿರುತ್ತೇನೆ ಎಂದು, ನಿಪಿ-1 ಮತ್ತು ನಿಪಿ-2 ದಾಖಲೆಗಳು ಹಾಗೂ ಅವುಗಳಲ್ಲಿರುವ ಸಹಿಯನ್ನು ಹಾಗೂ ಆರೋಪಿತರಾದ ನಿಮ್ಮನ್ನು ನ್ಯಾಯಾಲಯದಲ್ಲಿ ಗುರುತಿಸಿ ತನಗೆ ಕರ್ತವ್ಯಕ್ಕೆ ಅಡ್ಡಿ ಪಡಿಸಿದ ಆರೋಪಿಗಳು ಎಂದು ಗುರುತಿಸಿ ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 4: ಫ್ರಾಸಾ.1 ರವರು ತಮ್ಮ ಪಾಟೀ ಸವಾಲಿನಲ್ಲಿ ಮಠದ ಕಾವಲಿನ ಅರಣ್ಯ ವಲಯಕ್ಕೆ ಸಂಪೂರ್ಣವಾಗಿ ಮೀಸಲು ಅರಣ್ಯ ವಾಗಿದುದ ಅದಕ್ಕೆ ಸಂಪೂರ್ಣ ರಕ್ಷಣೆ ಇರುವುದಿಲ್ಲ ಎಂದು, ಅರಣ್ಯಕ್ಕೆ ಕಾವಲು ಗ್ರಾಮದಿಂದ ಅರಣ್ಯಕ್ಕೆ ಹೋಗಲು ರಸ್ತೆ ಇದೆ ಎಂದು, ಆರೋಪಿತಾದ ನೀವುಗಳು ತಮ್ಮ ಅರಣ್ಯದ ಯಾವ ಭಾಗದಲ್ಲಿ ನೀಲಗಿರಿ ಸರಗಳನ್ನು ಕತ್ತರಿಸಿದ್ದಾರೆಂದು ಪಂಚನಾವೆಯನ್ನು ಮಾಡಿರುತ್ತಾರೆ, ಸದರಿ ಪಂಚನಾವೆಯ ವರದಿಯನ್ನು ನಾವು ಸಾಲೀಗ್ರಾಮ ಪೊಲೀಸ್ ಠಾಣೆಗೆ ನೀಡಿರುತ್ತೇವೆ ಎಂದು, ನಾಗೇಶ ಬಿನ್ ಕುಮಾರ ರವರ ಹೊಗೆಸೊಪ್ಪು ಬ್ಯಾರನ್ ಮನೆಯ ಹಿಂಭಾಗದಲ್ಲಿದ್ದ ನೀಲಗಿರಿ ಮರಗಳನ್ನು ವಶಪಡಿಸಿಕೊಂಡಿರುತ್ತಾರೆ ಎಂದು, ನಾಗೇಶ ರವರ ವಿರುದದ್ದ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದು ಸದರಿ ಎಫ್ ಓ ಸಿ ದಾಖಲೆಗಳನ್ನು ತಾನು ಪೊಲಿಸನವರಿಗೆ ನೀಡಿರುತ್ತೇನೆ ಎಂದು, ನಾಗೇಶ 1 ನೇ ಆರೋಪಿಯಾದ ನಿಮ್ಮ ಮಗ ಎಂದು ತಿಳಿಸಿರುತ್ತಾರೆ ಎಂದು, ತಾನು ದಿನಾಂಕ 27/07/2016 ರಂದು ಮಾಹಿತಿಯನ್ನು ಮೇಲಾಧಿಕಾರಿಗಳಿಗೆ ನೀಡಿರುತ್ತೇನೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 5: ಫ್ರಾಸಾ.3 ಶಿವರಾಮೇಗೌಡ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು 2 ವರ್ಷಗಳ ಹಿಂದೆ ನಿಪಿ-2 ದೇವಸ್ಥಾನ ಹತ್ತಿರ ಸಹಿ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 6: ಫ್ರಾಸಾ.5 ಮಂಗಳ- ನಿವೃತ್ತ ಎ.ಎಸ್.ಐ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ03.08.2016 ರಂದು ತಾನು ಠಾಣಾ ಪ್ರಭಾರದಲ್ಲಿದ್ದಾಗ ಬೆಳಿಗ್ಗೆ 9 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಫಿರ್ಯಾದಿಯನ್ನು ಸ್ವೀಕರಿಸಿ ಸದರಿ ದೂರಿನ ಸಾರಾಂಶದ ಮೇರೆಗೆ ತಾನು ಆರೋಪಿತರ ವಿರುದ್ಧ ನಮ್ಮ ಠಾಣಾ ಗುನ್ನೆ ನಂ. 81/16 ರಲ್ಲಿ ಪ್ರಕರಣ ನೊಂದಾಯಿಸಿ ಪ್ರ.ವ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ಸಲ್ಲಿಸಿರುತ್ತೇನೆ ಎಂದು, ಅದೇ ದಿನ ಚಾಸಾ 8 ರವರೊಂದಿಗೆ ಘಟನಾ ಸ್ಥಳಕ್ಕೆ ಹೋಗಿ ಚಾಸಾಃ 5 ಮತ್ತು 6 ರವರ ಸಮಕ್ಷಮದಲ್ಲಿ ಚಾಸಾಃ 1 ರವರು ತೋರಿಸಿಕೊಟ್ಟ ಮೇರೆಗೆ ಘಟನಾ ಸ್ಥಳದ ಪಂಚನಾಮೆಯನ್ನು ಮದ್ಯಾಹ್ನ 3 ಗಂಟೆಯಿಂದ 3-45 ಗಂಟೆವರೆಗೆ ಮಾಡಿ ಮುಗಿಸಿರುತ್ತೇನೆ ಎಂದು, ಹಾಗೂ ಚಾಸಾಃ 1, 3 ಮತ್ತು 4 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ನಂತರ ಮುಂದಿನ ತನಿಖೆಗಾಗಿ ಈ ಪ್ರಕರಣದ ಕಡತವನ್ನು ಚಾಸಾ.11 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು, ನಿಪಿ-1, ನಿಪಿ-2 ದ ನಿಪಿ-4 ರಲ್ಲಿ ಸಹಿಗಳನ್ನು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 7: ಫ್ರಾಸಾ.5 ರವರು ಮುಂದುವರೆದು ತಮ್ಮ ಪಾಟೀ ಸವಾಲಿನಲ್ಲಿ ನಿಪಿ.2 ರ ಮಹಜರ್ನ್ನು ನಾನು ಕಾವಲುಹೊಸೂರಿನ ಜಯರಾಮೇಗೌಡರ ಜಮೀನಿನ ಪಕ್ಕದಲ್ಲಿ ಮಾಡಿರುತ್ತೇನೆ ಎಂದು, ಚಾಸಾ.1, 3 ಮತ್ತು 4 ರವರ ಹೇಳಿಕೆಗಳನ್ನು ನಾನು ಕಾವಲುಹೊಸೂರು ಗ್ರಾಮದಲ್ಲಿಯೇ ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 8: ಫ್ರಾಸಾ.6 ಮಹೇಶ ಎಂ.– ಪಿ.ಐ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ19.08.2016 ರಂದು ತಾನು ಈ ಪ್ರಕರಣದ ಕಡತವನ್ನು ನಾನು ಚಾಸಾಃ 10 ರವರಿಂದ ಪಡೆದು ತನಿಖೆಯನ್ನು ಮುಂದುವರೆಸಿರುತ್ತೇನೆ ಎಂದು, ಅದೇ ದಿನ ಚಾಸಾ–1 ರವರ ಕರ್ತವ್ಯ ದೃಡೀಕರಣ ಪತ್ರವನ್ನು ಚಾಸಾ–9 ರವರಿಂದ ಪಡೆದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು, ದಿನಾಂಕ 14.09.2016 ರಂದು ಈ ಪ್ರಕರಣದ ಆರೋಪಿತರಾದ ನೀವು ನೀರಿಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು, ಸೂಕ್ತ ಜಾಮೀನಿನ ಮೇಲೆ ಆರೋಪಿತರಾದ ನಿಮ್ಮನ್ನು ದಸ್ತುಗಿರಿ ಕ್ರಮ ಜರುಗಿಸಿ ಬಿಡುಗಡೆ ಮಾಡಿರುತ್ತೇನೆ ಎಂದು, ದಿನಾಂಕ 23/11/2016 ರಂದು ದಿನ ಚಾಸಾ–2 ಮತ್ತು 3 ರವರ ಕರ್ತವ್ಯ ದೃಡೀಕರಣ ಪತ್ರವನ್ನು ಮತ್ತು ಎಫ್.ಸಿ.ಒ. ಪ್ರತಿಯನ್ನು ಪಡೆದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು, ಆರೋಪಿತರಾದ ನಿಮ್ಮ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು, ನಿಪಿ–5 ರಿಂದ 7 ಹಾಗೂ ನಿಪಿ–8 ರಲ್ಲಿರುವ ತಮ್ಮ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 9: ಫ್ರಾಸಾ.7 ಕುಮಾರ ಬಿ.ಎನ್. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 16.08.2017 ರಂದು ತಾನು ಚಾಸಾ–1 ರಿಂದ 3 ರವರ ಹಾಜರಾತಿ ಪ್ರಮಾಣ ಪತ್ರಗಳನ್ನು ತನಿಖಾಧಿಕರಿಗಳಿಗೆ ನೀಡಿರುತ್ತೇನೆ ಎಂದು, ನಿಪಿ.5 ರಿಂದ ನಿಪಿ.7 ಎಂದು ನಿಶಾನೆಪಡಿಸಲಾದ ಚಾಸಾ–1 ರಿಂದ 3 ರವರ ಕರ್ತವ್ಯ ದೃಢೀಕರಣ ಪತ್ರಗಳನ್ನು ಹಾಗೂ ಅದರಲ್ಲಿರುವ ತಮ್ಮ ಸಹಿಗಳನ್ನು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 10: ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುವಿರಾ?

ಉತ್ತರಃ

ಪ್ರಶ್ನೆ 11: ನಿಮಗೆ ಈ ಪ್ರಕರಣದಲ್ಲಿ ಏನನ್ನಾದರೂ ಹೇಳುವುದು ಇದೆಯಾ?

ಉತ್ತರಃ

ಪ್ರಶ್ನೆ.12: ನಿಮಗೆ ಈ ಪ್ರಕರಣದಲ್ಲಿ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ದಾಖಲೆಗಳನ್ನು ಸಲ್ಲಿಸುವುದು ಇದೆಯಾ?

ಉತ್ತರಃ

(ಈ ಮೇಲೆ ಹೇಳಿದ ಸಾಕ್ಷಿಯ ಹೇಳಿಕೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡು ದೃಢೀಕರಿಸಲಾಯಿತು)

ದಿನಾಂಕಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಕೃಷ್ಣರಾಜನಗರ.